ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಎಂ.ಎಲ್. ಅನಿಲ್ ಕುಮಾರ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 685

ಉತ್ತರಿಸಬೇಕಾದ ದಿನಾಂಕ : 22-02-2022

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ರೈತರಿಗೆ ವಿತರಿಸುವ ಸಾಲಕ್ಕೆ ವಿಧಿಸಿರುವ ಬಡ್ಡಿ ದರವೆಷ್ಟು; (ವಿವರ ನೀಡುವುದು)	ರಾಜ್ಯದ ರೈತರಿಗೆ ಕೃಷಿ ಪತ್ತಿನ ಸಹಕಾರ ಸಂಘಗಳು ವಿತರಿಸುವ ಸಾಲಗಳಿಗೆ ವಿಧಿಸುವ ಬಡ್ಡಿ ದರ 1. **ಅಲ್ಪಾವಧಿ ಬೆಳೆ ಸಾಲ:-** 2020-21 ನೇ ಸಾಲಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ನಿಗದಿತ ಅವಧಿಯಲ್ಲಿ ಮರುಪಾವತಿಸುವ ರೈತರಿಗೆ ರೂ.3.00 ಲಕ್ಷಗಳವರೆಗಿನ ಸಂಪೂರ್ಣ ಸಾಲಗಳಿಗೆ ಶೂನ್ಯ ಬಡ್ಡಿ ದರ ವಿಧಿಸಬೇಕಿರುತ್ತದೆ. ಈ ರೀತಿ ವಸೂಲಾದ ಸಾಲಗಳಿಗೆ ಕೇಂದ್ರ ಸರ್ಕಾರದಿಂದ ಶೇ.3 ಮತ್ತು ರಾಜ್ಯ ಸರ್ಕಾರದಿಂದ ಶೇ.5.6 ರ ಬಡ್ಡಿ ಸಹಾಯಧನ ಕ್ಲೇಮು ಮಾಡಬೇಕಿರುತ್ತದೆ. 2021-22ನೇ ಸಾಲಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ನಿಗದಿತ ಅವಧಿಯಲ್ಲಿ ಮರುಪಾವತಿಸುವ ರೈತರಿಗೆ ರೂ.3.00 ಲಕ್ಷಗಳವರೆಗಿನ ಸಾಲಗಳಿಗೆ ಶೂನ್ಯ ಬಡ್ಡಿದರ ವಿಧಿಸಬೇಕಿರುತ್ತದೆ. 2. **ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲ:-** 2020-21 ನೇ ಸಾಲಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ನಿಗದಿತ ಅವಧಿಯಲ್ಲಿ ಮರುಪಾವತಿಸುವ ರೈತರಿಗೆ ರೂ.10.00 ಲಕ್ಷಗಳವರೆಗಿನ ಸಂಪೂರ್ಣ ಸಾಲಗಳಿಗೆ ಶೇ.3 ರ ಬಡ್ಡಿ ದರ ವಿಧಿಸಬೇಕಿರುತ್ತದೆ. ಈ ರೀತಿ ವಸೂಲಾದ ಸಾಲಗಳಿಗೆ ರಾಜ್ಯ ಸರ್ಕಾರದಿಂದ ಶೇ.4.8 ರ ಬಡ್ಡಿ ಸಹಾಯಧನ ಕ್ಲೇಮು ಮಾಡಬೇಕಿರುತ್ತದೆ 2021-22 ನೇ ಸಾಲಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ನಿಗದಿತ ಅವಧಿಯಲ್ಲಿ ಮರುಪಾವತಿಸುವ ರೈತರಿಗೆ ರೂ.10.00 ಲಕ್ಷಗಳವರೆಗಿನ ಸಾಲಗಳಿಗೆ ಶೇ.3 ರ ಬಡ್ಡಿದರ ವಿಧಿಸಬೇಕಿರುತ್ತದೆ.

...2

ಆ)	ಇತ್ತೀಚೆಗೆ ರಾಜ್ಯದ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಹಲವು ಜಿಲ್ಲೆಗಳಲ್ಲಿ ರೈತರಿಗೆ ಕಿಸಾನ್ ಕ್ರೆಡಿಟ್ ಸಾಲದ ಮುಖಾಂತರ ಸಾಲ ನೀಡಿ ಅಧಿಕ ಮೊತ್ತದ ಬಡ್ಡಿ ವಸೂಲಾತಿ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ ಅಧಿಕ ಮೊತ್ತದ ಬಡ್ಡಿ ವಸೂಲಾತಿ ಮಾಡಿದ ಅಧಿಕಾರಿಗಳ ಮೇಲೆ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ; (ವಿವರ ನೀಡುವುದು.)	ರಾಜ್ಯದ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಹಲವು ಜಿಲ್ಲೆಗಳಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೈತರಿಗೆ ಕೆಸಿಸಿ ಬೆಳೆ ಸಾಲ ವಿತರಿಸಿ ರೂ.3.00 ಲಕ್ಷಗಳವರೆಗಿನ ಸಾಲಗಳನ್ನು ರೈತರು ನಿಗದಿತ ಅವಧಿಯಲ್ಲಿ ಮರುಪಾವತಿಸಿದಲ್ಲಿ ಅಂತಹ ರೈತರಿಂದ ಸರ್ಕಾರ ನಿಗದಿಪಡಿಸಿರುವುದಕ್ಕಿಂತ ಹೆಚ್ಚಿನ ಬಡ್ಡಿ ದರದಲ್ಲಿ ಸಾಲ ವಸೂಲು ಮಾಡುತ್ತಿರುವ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ. ಆದ ಕಾರಣ ಸಹಕಾರ ಸಂಘಗಳ ವಿರುದ್ಧ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ 2020-21 ಮತ್ತು ಪೂರ್ವದಲ್ಲಿ ರೂ.3.00 ಲಕ್ಷಗಳಿಗಿಂತ ಹೆಚ್ಚಿನ ಮೊತ್ತದಲ್ಲಿ ವಿತರಿಸಿದ ಸಾಲಗಳಿಗೆ ಬೆಳಗಾವಿ, ಬಳ್ಳಾರಿ, ಚಿಕ್ಕಮಗಳೂರು, ಹಾಸನ, ಕೊಡಗು, ಕೋಲಾರ ಮತ್ತು ಚಿಕ್ಕಬಳ್ಳಾಪುರ, ಮೈಸೂರು, ಮತ್ತು ಶಿವಮೊಗ್ಗ ಡಿಸಿಸಿ ಬ್ಯಾಂಕಿನ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು 2021-22 ನೇ ಸಾಲಿನಲ್ಲಿ ಆಯಾ ಸಂಘ/ಬ್ಯಾಂಕಿನ ಬಂಡವಾಳದ ವೆಚ್ಚದ ಆಧಾರದ ಮೇಲೆ ಸಾಮಾನ್ಯ ಬಡ್ಡಿ ದರ ವಸೂಲು ಮಾಡುತ್ತಿರುತ್ತವೆ. ಕೋಲಾರ ಮತ್ತು ಚಿಕ್ಕಬಳ್ಳಾಪುರ ಡಿಸಿಸಿ ಬ್ಯಾಂಕ್ ಈ ಸಾಲಗಳನ್ನು ಶೇ.10 ರ ಬಡ್ಡಿ ದರದಲ್ಲಿ ಸಾಲ ವಸೂಲು ಮಾಡುತ್ತಿರುತ್ತದೆ. ಡಿಸಿಸಿ ಬ್ಯಾಂಕುವಾರು ರೂ.3.00 ಲಕ್ಷಗಳಿಗಿಂತ ಹೆಚ್ಚಿನ ಮೊತ್ತದ ಸಾಲ ವಿತರಿಸಿದ ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ.
ಇ)	ಕರೋನ ಸಂಕಷ್ಟದಿಂದ ಬೆಳೆಹಾನಿ ಮತ್ತು ಇನ್ನಿತರೆ ಸಂಕಷ್ಟದಲ್ಲಿ ಸಿಲುಕಿ ಜೀವನ ಸಾಗಿಸುತ್ತಿರುವ ರೈತರಿಗೆ ಅಕ್ರಮವಾಗಿ ಹೆಚ್ಚುವರಿ ಬಡ್ಡಿ ವಿಧಿಸಿ ಸಾಲ ವಸೂಲಾತಿ ಮಾಡುತ್ತಿರುವುದರ ಕುರಿತು ಸರ್ಕಾರದ ನಿಲುವೇನು? (ವಿವರ ನೀಡುವುದು)	2020-21 ನೇ ಸಾಲಿನಲ್ಲಿನ ಸರ್ಕಾರದ ಆದೇಶ ದನ್ವಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೂ.3.00 ಲಕ್ಷಗಳಿಗಿಂತ ಹೆಚ್ಚಿನ ಬೆಳೆ ಸಾಲಗಳಿಗೆ ಮತ್ತು ಸುಸ್ತಿ ಸಾಲಗಳಿಗೆ ಸಾಮಾನ್ಯ ಬಡ್ಡಿ ದರದಲ್ಲಿ ಸಾಲ ವಸೂಲು ಮಾಡುತ್ತಿದ್ದು, ಅಕ್ರಮವಾಗಿ ಹೆಚ್ಚಿನ ಬಡ್ಡಿ ವಸೂಲು ಮಾಡದೇ ಇರುವುದರಿಂದ ಸಹಕಾರ ಸಂಘಗಳ ವಿರುದ್ಧ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. 2021-22 ನೇ ಸಾಲಿನಿಂದ ರೂ.3.00 ಲಕ್ಷಗಳಿಗಿಂತ ಹೆಚ್ಚಿನ ಸಾಲ ಪಡೆದಿದ್ದರೂ ಸಹ ಮೊದಲ ರೂ.3.00 ಲಕ್ಷಗಳ ಮೊತ್ತದ ವರೆಗಿನ ಸಾಲಗಳಿಗೆ ಶೂನ್ಯ ಬಡ್ಡಿ ದರ ಅನ್ವಯಿಸಲು ಸೂಚಿಸಲಾಗಿದೆ.

ಸಂಖ್ಯೆ ಸಿಒ 54 ಸಿಎಲ್ಎಸ್ 2022

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: ೬೮೫ ಗೆ ಅನುಬಂಧ

ದಿ.1-4-2021 ರಿಂದ ದಿ.31-3-2021 ರ ವರೆಗೆ ಸಹಕಾರ ಸಂಘಗಳು ಅಲ್ಪಾವಧಿ ಬೆಳೆ ಸಾಲ ವಿತರಿಸಿದ ವಿವರ

(ರೂ.ಲಕ್ಷಗಳಲ್ಲಿ)

Sl No	Name of DCC Bank	Up to Rs 1 lakh		Rs 1 lakh to Rs 2 lakhs		Rs 2 lakh to Rs 3 lakhs		Above Rs 3 lakhs		Total	
		Number	Amount	Number	Amount	Number	Amount	Number	Amount	Number	Amount
1	Bagalkot	210859	93893.64	23651	32114.79	759	1633.82	0	0.00	235269	127642.25
2	Bangalore	97617	54459.62	716	895.60	0	0.00	0	0.00	98333	55355.22
3	Belgaum	393312	147296.20	23226	32714.66	16769	43695.31	11	42.56	433318	223748.73
4	Bellary	69572	41939.02	16639	22565.03	3420	8446.40	11	91.63	89642	73042.08
5	Bidar	140126	58663.37	9989	13822.59	4364	11589.34	0	0.00	154479	84075.30
6	Bijapur	220637	109474.21	322	560.98	4801	13339.99	0	0.00	225760	123375.18
7	Chikmagalur	9963	6125.23	24063	39823.65	8872	24470.65	112	923.68	43010	71343.21
8	Chitradurga	46403	22537.89	3666	5301.98	633	1671.35	0	0.00	50702	29511.22
9	Davangere	83624	26008.22	11936	14925.37	3971	8934.75	0	0.00	99531	49868.34
10	Dharwad	73776	23240.32	14823	15023.46	2415	5224.15	0	0.00	91014	43487.93
11	Gulburga	40538	10946.19	719	1821.97	84	368.87	0	0.00	41341	13137.03
12	Hassan	139118	66056.94	4556	6815.96	1096	2690.36	2	17.00	144772	75580.26
13	Kanara	39845	29030.61	29560	17285.05	11714	20567.48	0	0.00	81119	66883.14
14	Kodagu	15525	10339.73	10894	16199.05	11026	30171.05	484	1764.59	37929	58474.42
15	Kolar	26085	22212.38	6362	10747.74	3034	7440.84	2489	2141.55	37970	42542.51
16	Mandya	125757	60704.42	9258	12346.13	1787	4511.11	0	0.00	136802	77561.66
17	Mysore	55647	32226.19	18803	27164.98	5908	15486.60	7	35.00	80365	74912.77
18	Raichur	101723	44379.18	20908	9372.00	357	1378.24	0	0.00	122988	55129.42
19	S.Canara	85049	62150.95	33854	51423.90	17494	46029.52	0	0.00	136397	159604.37
20	Shimoga	79459	44637.51	12881	19990.81	5723	14727.50	7	36.60	98070	79392.42
21	Tumkur	105885	45859.85	3670	4664.06	576	1478.38	0	0.00	110131	52002.29
	Total	**2160520**	**1012181.68**	**280496**	**355579.76**	**104803**	**263855.71**	**3123**	**5052.61**	**2548942**	**1636669.75**